
ನಿಲ್ಲಿಸುತ್ತದೆ. ಗಂಡನ್ನಲ್ಲ, ಗಂಡಾಳಿಕೆಯನ್ನು, ಹೆಣ್ಣಿನ ಶೋಷಣೆಯನ್ನಲ್ಲ, ಶೋಷಣೆಯ ಅನಂತ ಮಾದರಿಗಳು ಮತ್ತು ಕಾರ್ಯಮಾದರಿಗಳನ್ನು, ಪ್ರಭುತ್ವವು ಹೆಣ್ಣು, ದಲಿತರು ಮತ್ತು ಅಂಚಿನಲ್ಲಿರುವ ಎಲ್ಲರನ್ನೂ ಹೇಗೆ ತನಗೆ ಬೇಕಾದ ಹಾಗೆ ಬಳಸಿ ಬಿಸಾಡುತ್ತದೆ ಎನ್ನುವುದನ್ನು, ಧರ್ಮವೂ ಶೋಷಣೆಯ ಆಕರವೇ ಆಗಿಬಿಡುವ ದುರಂತವನ್ನು, ಎಲ್ಲ ನೋವುಗಳಿಗಿಂತ ಹಸಿವಿನ ಬವಣೆ ಆದಿಮವಾದುದು ಎನ್ನುವ ಕಟು ಸತ್ಯವನ್ನು, ಶೋಷಣೆಯಲ್ಲಿಯೂ ಇರುವ ಶ್ರೇಣೀಕರಣಗಳನ್ನು, ಮನುಷ್ಯರ ಆತ್ಮವಂಚನೆಯ ನೂರು ಪರಿಗಳನ್ನು, ಸಿರಿವಂತಿಕೆಯ ಮದವನ್ನು... ಹೀಗೆ ಸಮುದಾಯದ ಬದುಕಿನ ಎಲ್ಲ ಮಗ್ಗುಲುಗಳನ್ನೂ ಸ್ಪರ್ಶಿಸಲು ಬಾನು ಹಾತೊರೆಯುತ್ತಾರೆ.

ಪ್ರಗತಿಯ ಸುಳ್ಳು ವ್ಯಾಖ್ಯಾನಗಳನ್ನು ಬಯಲಿಗೆಳೆಯುವುದರಲ್ಲಿಯೂ ಇವರಿಗೆ ಅಪಾರ ಆಸಕ್ತಿಯಿದೆ. ಮೇಲೆ ಚರ್ಚಿಸಿದ ಮೂರು ಕಥೆಗಳು ಮೇಲ್ನೋಟಕ್ಕೆ ಸ್ತ್ರೀಕೇಂದ್ರಿತ ಎನ್ನಿಸಿದರೂ ತಮ್ಮೊಡಲಲ್ಲಿ ಇವು ಈ ಎಲ್ಲ ಅಂಶಗಳನ್ನೂ ಇಟ್ಟುಕೊಂಡಿವೆ. ಧರ್ಮವೇ ಮೂಲವಾಗಿ ಹೆಣ್ಣನ್ನು, ಬಡವರನ್ನು ಬಳಸಿ ಬಿಸಾಡುವ ಅನೇಕ ವಸ್ತುಗಳನ್ನು ಬಾನು ಉದ್ದಕ್ಕೂ ಚಿತ್ರಿಸುತ್ತಲೇ ಬಂದಿದ್ದಾರೆ. ಬಾನು ಅವರ ಕಥೆಗಳ ಮಹತ್ವ ಮತ್ತು ಪ್ರಸ್ತುತತೆ ಇರುವುದೇ ಈ ಪ್ರಧಾನ ಸಂಗತಿಯಲ್ಲಿ. ಈ ಅಂಶಗಳನ್ನು ಬಾನು ನಿರ್ದಿಷ್ಟ ಧರ್ಮದ ಉದಾಹರಣೆಯನ್ನು ಬಳಸಿಕೊಂಡು ಹೇಳುತ್ತಾರೆ ಎನ್ನುವುದು ನಿಜ. ಆದರೆ, ನಿಜದಲ್ಲಿ ಇದು ಎಲ್ಲ ಧರ್ಮದ, ಎಲ್ಲ ದೇಶಗಳ ಪಾಡಲ್ಲವೆ ಎನ್ನುವ ಸಾಧಾರಣೀಕರಣದ ವೇದಿಕೆಯನ್ನು ರಚಿಸುವಲ್ಲಿ ಇವರ ಕಥೆಗಳು ಪಡೆಯುವ ಯಶಸ್ಸು ದೊಡ್ಡದು. ವಿಶ್ವಾತ್ಮಕ ಸತ್ಯಗಳನ್ನು ಸ್ಥಳೀಯ ಸತ್ಯಗಳ ಮೂಲಕ ಪ್ರಚುರಪಡಿಸುವ ಅಸಾಧಾರಣ ಕೆಲಸ ಇದು. ಅಸಾಧಾರಣ ಏಕೆಂದರೆ, ಇದು ಕೇವಲ ವರದಿಗಾರ್ತಿಯ ಕೆಲಸವಲ್ಲ. ಅನುಭವದ ಸೌಂದರ್ಯೀಕರಣ ಮಾತ್ರ ಇಷ್ಟು ದೊಡ್ಡದಾಗಲಾರದು. ಇದಕ್ಕೆ ಪ್ರಾಯೋಗಿಕ ಹೋರಾಟದ ಬಲವೂ ಇದೆ. ಬಾನು ಕಥೆಗಳಿಗೆ ಅಧಿಕೃತತೆ ಬಂದಿರುವುದೇ, ಜಾಗತಿಕವಾಗಿ ದೇಶಕಾಲಾತೀತವಾಗಿ ಮನಸ್ಸುಗಳನ್ನು ಇದು ಮುಟ್ಟಿರುವುದೇ ಅದು ಸಾಧಿಸಿರುವ




ಸಾಧಾರಣೀಕರಣದ, ಎಂದರೆ, ಕೆಲವರ ಅನುಭವವು ಎಲ್ಲರ ಅನುಭವವಾಗಬಲ್ಲ, ಮಾನವೀಯ ಮಿಡಿತವಾಗಿ ಇದನ್ನು ಹಿಡಿದಿರುವ ಬಾನು ಅವರ ಅಸೀಮ ಶಕ್ತಿಯಿಂದಾಗಿ. ಇಂಥ ವೇದಿಕೆಯನ್ನು ಕೇವಲ ಆದರ್ಶದ ಹಂಬಲದಿಂದ ಸಾಧಿಸುವುದು ಸಾಧ್ಯವಿಲ್ಲ. ಈ ಗಳಿಗೆಯಲ್ಲಿ ನನಗಂತೂ ನೆನಪಾಗುತ್ತಿರುವವರು ಮಹಾಶ್ವೇತಾದೇವಿಯವರು. ತಾನು ನಂಬಿದ ದಾರಿಯಲ್ಲಿ ನಡೆಯಲು ಎಂದೂ ಹಿಂಜರಿಯದ, ರಾಜಿ ಮಾಡಿಕೊಳ್ಳದ ಮಹಾಶ್ವೇತಾದೇವಿಯವರ ದಾರಿಯಲ್ಲಿಯೇ ಬಾನು ಅವರೂ ಸಾಗುತ್ತಿದ್ದಾರೆ. ಇದನ್ನು ಹೋಲಿಕೆ ಎನ್ನುವ ಅಗತ್ಯವಿಲ್ಲ, ಸಹಪಯಣ ಎಂದು ಖಂಡಿತಾ ಕರೆಯಬಹುದು.

'With these stories we live' ಎನ್ನುವುದು ಎಷ್ಟು ನಿಜವಲ್ಲವೆ ಎನ್ನಿಸಿಬಿಡುತ್ತಿದೆ. ಬೂಕರ್ ಪ್ರಶಸ್ತಿಯೊಂದು ರಾಜಕೀಯ ಮತ್ತು ಸಾಂಸ್ಕೃತಿಕ ಹೇಳಿಕೆ. ಹೆಣ್ಣಿನ ಹೋರಾಟಕ್ಕೂ ಸೌಹಾರ್ದದ ಹೋರಾಟಕ್ಕೂ, ಅಂತಃಕರಣ ಮತ್ತು ಮಾನವೀಯ ಹೋರಾಟಕ್ಕೂ ಸಿಕ್ಕ ಅಧಿಕೃತ ಮನ್ನಣೆ ಮತ್ತು ಬೆಂಬಲ ಇದು.

●